## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಬಂಗಾರಪೇಟೆ

## ಸಿ.ಸಿ. ನಂ. **2706/2022**

## ದೋಷಾರೋಪಣೆ

ಶ್ರೀಮತಿ, ಸುಕೀತಾ ಎಸ್ ಹದ್ಲಿ, ಬಿ.ಬಿ.ಎ. ಎಲ್.ಎಲ್.ಬಿ. (ಆನರ್ಸ್) ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಬಂಗಾರಪೇಟೆ ಆದ ನಾನು

1. ಮೋಹನ್ ಅಲಿಯಾಸ್ ಮೋಹನ್ ರಾಜ್,
   ಬಿನ್ ನಾರಾಯಣಪ್ಪ ,
   ಸುಮಾರು 39 ವರ್ಷ.

2. ನಾರಾಯಣಪ್ಪ ,
   ಬಿನ್ ಲೇಟ್ ರಾಮಪ್ಪ ,
   ಸುಮಾರು 68 ವರ್ಷ.

3. ರಾಣೆಯಮ್ಮ,
   ಕೋಂ. ನಾರಾಯಣಪ್ಪ,
   ಸುಮಾರು 65 ವರ್ಷ,(ಮರಣ ಹೊಂದಿರುತ್ತಾರೆ)

4. ಕೃಷ್ಣಪ್ಪ ,
   ಬಿನ್ ಮುನಿಯಪ್ಪ,
   ಸುಮಾರು 53 ವರ್ಷ,

ಎಲ್ಲರ ವಾಸಃ ಕದಿರೇನಹಳ್ಳಿ ಗ್ರಾಮ,
ಬಂಗಾರಪೇಟೆ ತಾಲ್ಲೂಕು.

ಎಂಬ ಆರೋಪಿಗಳಾದ ನಿಮ್ಮ ಮೇಲೆ ಈ ಕೆಳಗಿನಂತೆ ಹೊರಿಸುವ ದೋಷಾರೋಪಣೆ ಏನೆಂದರೆ -

ಅತ್ತಿಗಿರಿಕೊಪ್ಪ ಗ್ರಾಮದ ಜಮೀನು ಸರ್ವೆ ನಂ 176 ರಲ್ಲಿನ 30 ಗುಂಟೆ ಜಮೀನು ಇದ್ದು, ಅದರಲ್ಲಿ ಮುನಿಸ್ವಾಮಪ್ಪ - ಚಾಸಾ-01 ರವರು ಮನೆಯನ್ನು ಕಟ್ಟಿಕೊಂಡು ಜೀವನ ಮಾಡಿಕೊಂಡಿದ್ದು, ಸದರಿಯವರಿಗೂ ಮತ್ತು 1 ರಿಂದ 3 ನೇ ಆರೋಪಿಗಳಾದ ನಿಮ್ಮ ನಡುವೆ ಅತ್ತಿಗಿರಿಕೊಪ್ಪ ಗ್ರಾಮದ ಜಮೀನು ಸರ್ವೆ ನಂ 183 ರಲಿ., 12 ಗುಂಟೆ ಜಮೀನಿನ ವಿಚಾರದಲಿ ತಕರಾರು ಇದ್ದು, ದಿನಾಂಕಃ 10.08.2022 ರಂದು ಮದ್ಯಾಹ್ನ ಸುಮಾರು 03-00 ಗಂಟೆಯಲಿ ಚಾಸಾ -01 ರವರು ತಮ್ಮ ಮನೆಯ ಬಳಿ ಇದ್ದಾಗ ಆರೋಪಿತರಾದ ನೀವುಗಳು ಅಲ್ಲಿಗೆ ಹೋಗಿ

ಚಾ.ಸಾ-01 ರವರ ಮನೆ ಮುಂದೆ ದಾರಿಯಲಿ ಬಾಣಿಯನ್ನು ತೆಗೆಯಲು ಹೋದಾಗ ಚಾ.ಸಾ-01 ರವರು ತಕರಾರು ಇರುವ ಜಮೀನಿನಲ್ಲಿ ಬಾಣಿಯನ್ನು ತೆಗೆಯುವುದು ಬೇಡವೆಂದು ಹೇಳಿದಾಗ 1 ನೇ ಆರೋಪಿಯಾದ ನೀವು ನಿಮ್ಮ ಕೈಯಲ್ಲಿದ ಗಡಾರೆಯಿಂದ ಚಾ.ಸಾ-01 ರವರ ಎಡಗಾಲಿನ ಮೇಲೆ ಹೊಡೆದು ರಕ್ತ ಗಾಯ ಪಡಿಸಿರುತ್ತೀರಿ, 2 ನೇ ಆರೋಪಿಯಾದ ನೀವು ನಿಮ್ಮ ಕೈಯಲ್ಲಿದ ಚನಿಕೆಯಿಂದ ಚಾ.ಸಾ-01 ರವರ ತಲೆಗೆ ಹೊಡೆದು ರಕ್ತಗಾಯ ಪಡಿಸಿರುತ್ತೀರಿ , ಜಮೀನಿನ ವಿಚಾರಕ್ಕೆ ಬಂದರೆ ಹೊಡೆದು ಸಾಯಿಸುವುದಾಗಿ ಪ್ರಾಣಬೆದರಿಕೆಯನ್ನು ಹಾಕಿದ್ದು. 3 ನೇ ಆರೋಪಿಯಾದ ನೀವು ಕೆಟ್ಟ ಮಾತುಗಳಿಂದ ಬೈದಿರುತ್ತೀರಿ. 1 ರಿಂದ 3 ನೇ ಆರೋಪಿಗಳಾದ ನೀವುಗಳು 4 ನೇ ಆರೋಪಿಯ ಕುಮ್ಮಕ್ಕಿನಿಂದ ಚಾ.ಸಾ-01 ರವರ ಮೇಲೆ ಗಲಾಟೆ ಮಾಡಿರುತ್ತೀರಿ . ಆದುದರಿಂದ ನೀವುಗಳು ಭಾರತ ದಂಡ ಸಂಹಿತೆಯ ಕಲಂ.324, 504, 506 ಮತ್ತು 109 ರ ಸಹಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

(ಮೇಲಿನ ದೋಷಾರೋಪವನ್ನು ಆಪಾದಿತರಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ, ಹೇಳಿ ಅವರು ನೀಡಿದ ಉತ್ತರವನ್ನು ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.)

ದಿನಾಂಕಃ 04.07.2025

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಬಂಗಾರಪೇಟೆ.